ಗ್ರಾಮಾಂತರ ವಿದ್ಯುದ್ದೀಕರಣದ ಬಗ್ಗೆ.

(ಳಳಖ) ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಸಕ್ತ ಸಾಲಿನಲ್ಲಿ ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆಗಾಗಿ ಸರ್ಕಾರದವರು ನಿಗದಿ ಪಡಿಸಿರುವ ಹಣವೆಷ್ಟು ? (ಯೋಜನಾವಾರು ಮಾಹಿತಿ ನೀಡುವುದು);

ಆ) ಆ ಪೈಕಿ ಸರ್ಕಾರದವರು ಈವರೆಗೂ ಖರ್ಚು ಮಾಡಿರುವ ಹಣವೆಷ್ಟು ;

ಇ) ವರ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಮೇಲ್ಕಾಣಿಸಿರುವ ಯೋಜನೆ ಮೇರೆಗೆ ಕೈಕೊಂಡ ಕಾರ್ಯಗಳೆಷ್ಟು ಹಾಗೂ ಅವುಗಳಿಗೆ ತಗುಲಿದ ವೆಚ್ಚವೆಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—

ಅ) ಪ್ರಸಕ್ತ ಸಾಲಿನಲ್ಲಿ ಯೋಜನಾ ಬಾಬ್ತು ಗ್ರಾಮೀಣ ವಿದ್ಯುದ್ದೀಕರಣಕ್ಕೆ ನಿಗದಿಯಾದ ಹಣ ೭೫೨ ಲಕ್ಷ ರೂಪಾಯಿಗಳು.

ವಿವರ	ಹಣ ಲಕ್ಷ ರೂ.ಗಳು
೧) ಗ್ರಾಮೀಣ ವಿದ್ಯುತ್ ನಿಗಮದಡಿಯಲ್ಲಿ ಗ್ರಾಮೀಣ ವಿದ್ಯುದ್ದೀಕರಣಕ್ಕೆ ಯೋಜನಾ ಯೋಜನೆಗಳಂ	೫೮೪
೨) ಮಂಡಳಿ ಕಾರ್ಯಕ್ರಮದಲ್ಲಿ ಗ್ರಾಮೀಣ ಉಪಗ್ರಾಮ ಪರಿಶಿಷ್ಟ ವರ್ಗದವರ ಕಾಲೋನಿಗಳ ವಿದ್ಯುದ್ದೀಕರಣಕ್ಕೆ	೧೬೮

ಆ) ಮಂಡಳಿಯವರು ಈ ಬಾಬ್ತು ಇಲ್ಲಿಯವರೆಗೆ ೬೮೦.೨೮ ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ.

ಇ) ಬೆಂಗಳೂರು ಜಿಲ್ಲೆಯಲ್ಲಿ ೧೯೭೧ರ ಜನಗಣತಿಯಂತೆ ಶೇಕಡಾ ೧೦೦ರಷ್ಟು ರೆವಿನ್ಯೂ ಗ್ರಾಮಗಳ ವಿದ್ಯುದ್ದೀಕರಣ ನಡೆದಿದೆ. ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ೧೯೮೧ರ ಜನಗಣತಿಯಂತೆ ಇನ್ನು ೫ ಗ್ರಾಮಗಳು ವಿದ್ಯುದ್ದೀಕರಣವಾಗಬೇಕಾಗಿದ್ದು, ಇವನ್ನು ೧೯೮೮-೮೯ರಲ್ಲಿ ಮಾಡಲು ಉದ್ದೇಶಿಸಿದೆ. ಈ ಎರಡು ತಾಲ್ಲೂಕುಗಳಲ್ಲಿ ೧೯೮೨-೮೮ರ ಸಾಲಿನಲ್ಲಿ ೨೫೦ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವ ಗುರಿ ಇದ್ದು ೩೧-೦೨-೧೯೮೨ರ ವೇಳೆಗೆ ೪೫೩ ಪಂಪುಸೆಟ್ಟುಗಳಿಗೆ ಒದಗಿಸಲಾಗಿದೆ.

ಮೈಸೂರು ಕಾಗದ ಕಾರ್ಖಾನೆಯ ಕ್ಯಾಪ್ಟಿವ್ ಪ್ಲಾಂಟೇಷನ್ ಯೋಜನೆ ಬಗ್ಗೆ.

೩೭೮. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, (ಆಥನಿ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಕಾಗದ ಕಾರ್ಖಾನೆಯಂ ಕ್ಯಾಪ್ಟಿವ್ ಪ್ಲಾಂಟೇಷನ್ ಯೋಜನೆಗೆ ಯಾವ ವಿದೇಶದ ನೆರವು ದೊರಕಿದೆ ಹಾಗೂ ಆದರ ಪ್ರಮಾಣವೇನು;

ಆ) ಸದರಿ ಯೋಜನೆಗೆ ಎಷ್ಟು ಎಕರೆ ಜಮೀನನ್ನು ಕೊಡಲಾಗಿದೆ;

ಇ) ಶಿವಮೊಗ್ಗ-ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸದರಿ ಯೋಜನೆಗೆ ಹಾಗೂ ಅರಣ್ಯ ಅಭಿವೃದ್ಧಿಗಾಗಿ ಕೇಳಲಾದ ಜಮೀನಿನ ವಿಸ್ತೀರ್ಣವೆಷ್ಟು? ಮತ್ತು ಕೊಡಮಾಡಿದ ಜಮೀನೆಷ್ಟು;

ಈ) ಮೇಲಿನ ಜಿಲ್ಲೆಗಳಲ್ಲದೆ ಬೇರೆ ಜಿಲ್ಲೆಗಳಿಗೆ ಸೇರಿದ ಜಮೀನನ್ನು ಈ ಯೋಜನೆಗೆ ಕೊಡಲಾಗಿದೆಯೇ, ಹಾಗಿದ್ದಲ್ಲಿ ವಿವರಗಳೇನು?

ಶ್ರೀ ಜೆ. ಹೆಚ್. ಪಟೀಲ್, (ಕೈಗಾರಿಕೆ ಪಶಿತ್ತು ವಿದ್ಯುತ್ ಸಚಿವರು).—

ಅ) ಯಂ.ಕೆ.ಯು ಓವರ್‌ಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್‌ನಿಂದ ೧೦೧೮.೯೬ ಲಕ್ಷ ರೂ.ಗಳ ನೆರವು ದೊರೆತಿದೆ.

ಆ) ೭೫,೦೦೦ ಎಕರೆಗಳು

(೩೦,೦೦೦ ಹೆಕ್ಟೇರುಗಳು)

ಇ) ಸದರಿ ಯೋಜನೆಗೆ ಕೇಳಲಾಗಿರುವ ಮತ್ತು ಕೊಡಮಾಡಿದ ಜಮೀನನ್ನು ಈ ಕೆಳಗಿನಂತಿದೆ.

ಶಿವಮೊಗ್ಗ ಜಿಲ್ಲೆ	೨೪,೪೦೦ ಹೆಕ್ಟೇರು
ಚಿಕ್ಕಮಗಳೂರು ಜಿಲ್ಲೆ	೫,೬೦೦ ಹೆಕ್ಟೇರು

ಈ) ಇಲ್ಲ.

ಹೊಳೆದಂಡೆಯ ಮೇಲಿನ ಎಲ್ಲಾ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸುವ ಬಗ್ಗೆ.

೫೬೫. ಶ್ರೀ ಕೆ.ಟಿ. ಕ್ಕೋಳಿವಾಡ, (ರಾಣೆಬೆನ್ನೂರು).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ರಾಜ್ಯದಲ್ಲಿಯ ಹೊಳೆಯ ದಂಡೆಯ ಮೇಲಿರುವ ಎಲ್ಲಾ ಪಂಪುಸೆಟ್ಟುಗಳಿಗೆ ಫೆಬ್ರುವರಿ ಒಂದರಿಂದ ಜೂನ್ ಒಂದರವರೆಗೆ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅದರ ಉದ್ದೇಶವೇನು.

ಇ) ಧಾರವಾಡ ಜಿಲ್ಲೆಯಲ್ಲಿ ಕುಡಿಯಲಿಂವ ನೀರಿನ ಕೊರತೆ ಇಲ್ಲದ ಕಾರಣ ಅಲ್ಲಿ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಬಾರದೆಂದು ಜಿಲ್ಲಾ ಪರಿಷತ್ತು ನಿರ್ಣಯವೊಂದನ್ನು ಅನುಮೋದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಸದರಿ ನಿರ್ಣಯದ ಬಗ್ಗೆ ಸರ್ಕಾರದ ನಿಲುವೇನು ?

ಲಕ್ಷ್ಮೀರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಮತ್ತು ಆ) ಅನೇಕ ಗ್ರಾಮಗಳು ಮತ್ತು ನಗರಗಳು ಮತ್ತು ದೊಡ್ಡ ಪಟ್ಟಣಗಳೂ ಸಹ ಬೆಸಿಗೆಯಲ್ಲಿ ಕುಡಿಯುವ ನೀರಿನ ಅಭಾವಕ್ಕೆ ಒಳಗಾಗಿದ್ದುದರಿಂದ ರಾಜ್ಯಮಟ್ಟದ ಸಣ್ಣ ನೀರಾವರಿ ಸಮನ್ವಯ ಸಮಿತಿಯ ಸಭೆಯಲ್ಲಿ, ನದಿಗಳಿಂದ ಪ್ರತಿ ವರ್ಷವು ಬೇಸಿಗೆ ಕಾಲದಲ್ಲಿ (ಫೆಬ್ರುವರಿಯಿಂದ ಜೂನ್ ಕೊನೆಯವರೆಗೆ) ನೀರಾವರಿಗೆ ನೀರನ್ನು ಎತ್ತುವುದನ್ನು ನಿಷೇಧಿಸಬೇಕೆಂದು ನಿರ್ಧರಿಸಲಾಯಿತು. ಇಂತಹ ಗ್ರಾಮಗಳು ಮತ್ತು ನಗರಗಳಿಗೆ ಕುಡಿಯುವ ನೀರಿನ ಅಭಾವವು ಉಂಟಾಗದಿರಲೆಂಬ ಉದ್ದೇಶದಿಂದ ಇಂತಹ ನೀರಾವರಿ ಪಂಪು ಸೆಟುಗಳಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬೇಕೆಂದು ಸಂತ್ರೋಲೆಯಲ್ಲಿ ಸೂಚನೆ ಕೊಡಲಾಯಿತು.

ಇ) ಮತ್ತು ಈ) ರೈತರಿಗೆ ಅನಾನುಕೂಲವಾಗುತ್ತದೆಂದು ಮನವಿಗಳು ಬಂದಿರುವುದರಿಂದ ಮತ್ತು ಕುಡಿಯುವನೀರಿನ ಲಭ್ಯತೆಯು ಸುಧಾರಿಸಿರುವುದರಿಂದಲೂ ಇಂತಹ ನದಿದಂಡೆಗಳ ಮೇಲಿನ ನೀರಾವರಿ ಪಂಪುಸೆಟ್ಟುಗಳಿಗೆ ೧೯೯೬ನೇ ಇಸವಿಯ ಬೇಸಿಗೆ ತಿಂಗಳುಗಳಲ್ಲಿ ವಿದ್ಯುತ್ ಸಂಪರ್ಕವನ್ನು ತೆಗೆದು ಹಾಕಬಾರದೆಂದು ವಿದ್ಯುತ್ ಮಂಡಳಿಯವರಿಗೆ ಸೂಚನೆ ಕೊಡಲಾಗಿದೆ.